ಸಿ.ಸಿ. ನಂಬರಃ 682/2021
ಪಿ.ಡಬ್ಲ್ಯೂಃ 1

ದಿಃ 25-07-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ 1ನೇ ಆರೋಪಿ ಪರ ವಕೀಲರಾದ ಶ್ರೀ ವಿ.ಎಸ್.ಎನ್ ಇವರಿಂದಃ

ನೀವು ಯಾವ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಸಹಾಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಿಮ್ಮ ವಿರುದ್ಧ ಅಂಕೋಲಾ ನ್ಯಾಯಾಲಯದಲ್ಲಿ ಪ್ರಕರಣ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ವಾಸ ಮಾಡುತ್ತಿರುವ ಮನೆಯ ದಾಖಲಾತಿಗಳನ್ನು ನ್ಯಾಯಾಲಯಕ್ಕಾಗಲಿ ಅಥವಾ ಪೊಲೀಸರಿಗಾಗಲಿ ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮನೆಯು ಯಾವ ಸರ್ವೆ ನಂಬರಿನಲ್ಲಿ ಇದೆ ಎಂದು ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ಪೊಲೀಸರು ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನೀವು ದಾಖಲಾತಿಗಳನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಅವರು ಕೇಳಿರುವುದಿಲ್ಲ, ಆದ ಕಾರಣ ನಾನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-2 ಮತ್ತು 3 ರವರು ನಿಮ್ಮ ಸಂಬಂಧಿಕರು ಎಂದರೆ ನಮ್ಮ ಪಕ್ಕದ ಮನೆಯವರು ಎಂದು ನುಡಿಯುತ್ತಾರೆ. ಚಾಸಾ-4 ನಿಮ್ಮ ಸಂಬಂಧಿಕರು ಎಂದರೆ ಹೌದು ಎಂದು ನುಡಿಯುತ್ತಾರೆ. ಚಾಸಾ-6 ರಿಂದ 8 ರವರು ಯಾರು ಎಂದು ಗೊತ್ತಿರುವುದಿಲ್ಲ. ಚಾಸಾ-10 ಮತ್ತು 11 ರವರು ನಮ್ಮ ಸಂಬಂಧಿಕರು. ಚಾಸಾ-9 ನಮ್ಮ ಮನೆಯ ಕೆಲಸಗಾರರು. ನಿಮ್ಮ ಮನೆಯಿಂದ

ಚಾಸಾ-9 ರವರು ಮನೆಯು ಎಷ್ಟು ದೂರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು 3 ಕಿ.ಮೀ ಆಗುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಮನೆಯ ಲಾಕ್ ನ್ನು ಏನಾದರೂ ಪೊಲೀಸರು ಜಪ್ತಿ ಮಾಡಿಕೊಂಡಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಕೀ ಗಳನ್ನು ಠಾಣೆಗೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ಮನೆಯಲ್ಲಿಯೇ ಇರುತ್ತವೆ ಎಂದು ನುಡಿಯುತ್ತಾರೆ. ರೂ.35 ಸಾವಿರ ಕಳ್ಳತನವಾಗಿದೆ ಎಂದು ಅಂದಾಜಿನ ಮೇಲೆ ಹೇಳುತ್ತಿದ್ದೇನೆ. ಒಟ್ಟು ಎಷ್ಟು ಕಪಾಟುಗಳು ಇರುತ್ತವೆ ಎಂದರೆ 4 ಎಂದು ನುಡಿಯುತ್ತಾರೆ. ಹಣವು ನಂತಹದ್ದೇ ಕಪಾಟಿನಲ್ಲಿ ಇಟ್ಟಿರುತ್ತೀರಿ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು 2 ಕಪಾಟಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಒಂದೊಂದು ಕಪಾಟಿನಲ್ಲಿ ಎಷ್ಟು ಇಟ್ಟಿರುತ್ತೀರಿ ಎಂದರೆ ಸಾಕ್ಷಿಯು ಒಂದರಲ್ಲಿ 15 ಸಾವಿರ ಇನ್ನೊಂದರಲ್ಲಿ ರೂ.20 ಸಾವಿರ ಇಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಯಾವ ದಿನ ಹಣ ಇಟ್ಟಿರುತ್ತೀರಿ ಎಂದರೆ ಸಾಕ್ಷಿಯು ಹಿಂದಿನಿಂದ ಇಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅವು ಎಷ್ಟು ರೂಪಾಯಿಗಳ ನೋಟುಗಳು ಆಗಿರುತ್ತವೆ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. 3 ವರ್ಷಗಳ ಹಿಂದೆ ಹಣವನ್ನು ಇಟ್ಟಿರುತ್ತೇನೆ. ಹಣವನ್ನು ಯಾವ ಕಪಾಟಿನಲ್ಲಿ ಇಟ್ಟಿರುತ್ತೀರಿ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಮೊದಲನೇ ಮಹಡಿಯಲ್ಲಿರುವ ಕಪಾಟಿನಲ್ಲಿ ಇಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಹಣದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ವರದಿಯನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದೂರನ್ನು ಯಾರು ಹಾಗೂ ಎಲ್ಲಿ ಬರೆದಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಮನೆಯಲ್ಲಿ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಆಗ ಯಾರು ಯಾರು ಇದ್ದರು ಎಂದರೆ ಸಾಕ್ಷಿಯು ನನ್ನ ಹೆಂಡತಿ

ಮತ್ತು ಮಗ ಇದ್ದರು ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಪೊಲೀಸರು ಎಷ್ಟು ಗಂಟೆಗೆ ಬಂದಿದ್ದರು ಎಂದರೆ ಸಾಕ್ಷಿಯು ಸಂಜೆ ಸುಮಾರು 8 ಗಂಟೆಗೆ ಬಂದಿದ್ದರು ಎಂದು ನುಡಿಯುತ್ತಾರೆ. ಚಾಸಾ-2 ಮತ್ತು 3 ರವರನ್ನು ಯಾರು ಕರೆದಿರುತ್ತಾರೆ ಎಂದರೆ ಪೊಲೀಸರು ಎಂದು ನುಡಿಯುತ್ತಾರೆ. ನೀವೇನಾದರೂ ಪೊಲೀಸರಿಗೆ ಇದೇ ರೀತಿ ಬರೆಯಬೇಕು ಎಂದು ಹೇಳಿರುತ್ತೀರಾ ಎಂದರೆ ಅವರೇ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ಒಟ್ಟು ಎಷ್ಟು ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ 3 ಸಹಿಗಳನ್ನು ಪಂಚನಾಮೆಯಲ್ಲಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಠಾಣೆಯಲ್ಲಿ ಎಷ್ಟು ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಅಲ್ಲಿ ಯಾವುದೇ ಸಹಿಯನ್ನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದೂರಿನಲ್ಲಿ ಬಂಗಾರದ ವಸ್ತುಗಳು ಕಳ್ಳತನ ವಾದ ಬಗ್ಗೆ ನಮೂದು ಮಾಡಿದ್ದು ಇರುವುದಿಲ್ಲ ಎಂದರೆ ಸಾಕ್ಷಿಯು ರಾತ್ರಿಯಾಗಿದ್ದರಿಂದ ಗೊತ್ತಾಗಿರುವುದಿಲ್ಲ, ಆದ ಕಾರಣ ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಬಂಗಾರದ ವಸ್ತುಗಳು ಕಳ್ಳತನವಾಗಿರುವುದಿಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪಂಚನಾಮೆಗೆ ನೀವು ಪೊಲೀಸರ ಹೇಳಿಕೆಯ ಮೇರೆಗೆ ನೀವು ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಓದಿಕೊಂಡು ಮಾಡಿರುತ್ತೇನೆ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಮನೆಯ ರೇಖಾಂಶ ಮತ್ತು ಅಕ್ಷಾಂಶ ಎಷ್ಟು ತೋರಿಸಿರುತ್ತಾರೆ ಎಂದರೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಚೆಕ್ಕಂದಿ ಹೇಳಲು ಬರುತ್ತಾ ಎಂದರೆ ಬರುತ್ತದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ತಿಮ್ಮಪ್ಪ ನಾರಾಯಣ ನಾಯಕ ಇವರ ಮನೆ ಬರುತ್ತದೆ. ಪೊಲೀಸರು ಪೊಟೋಗಳನ್ನು ತೆಗೆದ ನಂತರ ನಿಮಗೆ ತೋರಿಸಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ.

ಯಾವುದರಲ್ಲಿ ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಅವರ ಮೊಬೈಲಿನಲ್ಲೇ ತೋರಿಸಿದ್ದು, ಯಾವ ಮೊಬೈಲ್ ಎಂದು ಗೊತ್ತಿರುವುದಿಲ್ಲ. ನಿಮ್ಮ ಪ್ರಕಾರ ಎಷ್ಟು ಪೊಟೋಗನಳ್ಳು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು 4-5 ಪೊಟೋಗಳನ್ನು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಮನೆಯ ನಕಾಶೆಯನ್ನು ಬಿಡಿಸಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಎಷ್ಟು ಗಂಟೆಯಿಂದ ಎಷ್ಟು ಗಂನಟೆಯವರೆಗೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ರಾತ್ರಿ 10.30 11.45 ಗಂಟೆಯವರೆಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾವ ಎಷ್ಟು ಜನ ಪೊಲೀಸರು ಬಂದಿದ್ದರು ಎಂದರೆ 5 ಜನ ಬಂದಿದ್ದರು ಎಂದು ನುಡಿಯುತ್ತಾರೆ. ಆರೋಪಿತರ ವೈಯಕ್ತಿಕ ಪರಿಚಯವಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೊಲೀಸರ ಹೇಳಿಕೆಯ ಮೇರೆಗೆ ಗುರುತಿಸಿದ್ದನ್ನು ಬಿಟ್ಟರೆ ವೈಯಕ್ತಿಕವಾಗಿ ಪರಿಚಯವಿಲ್ಲ ಎಂದರೆ ಸರಿ. ಪೊಲೀಸರು ಮತ್ತು ಹೇಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ಮೊದಲು ಒಂದೇ ಜೀಪಿನಲ್ಲಿ ಬಂದಿದ್ದರು ಎಂದು ನುಡಿದಿದ್ದು, ನಂತರ 2 ಜೀಪುಗಳಲ್ಲಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಜೀಪನ್ನು ಯಾರು ಚಲಾಯಿಸುತ್ತಿದ್ದರು ಎಂದರೆ ಗೊತ್ತಿರುವುದಿಲ್ಲ. ಆರೋಪಿತರು 2 ಜೀಪುಗಳಲ್ಲಿ ಇದ್ದರು. ಯಾವ ಆರೋಪಿಯ ಯಾವ ಜೀಪಿನಲ್ಲಿ ಇದ್ದರು ಎಂದು ಹೇಳಲು ಬರುವುದಿಲ್ಲ. ನಿಪಿ-10 ಮತ್ತು 11 ಪೊಟೋದಲ್ಲಿ ಮಾಸ್ಕ ಹಾಕಿದ್ದರಿಂದ ಯಾರು ಯಾರು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮನೆಯಲ್ಲಿ ಯಾವುದೇ ಕಳ್ಳತನವಾಗಿದ್ದು ಇರುವುದಿಲ್ಲ. ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿತರಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂದರೆ

ಸರಿಯಲ್ಲ. ಬಂಗಾರ ಆಭರಣಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಅವಶ್ಯವಿದ್ದರೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ.

ಉಳಿದ ಆರೋಪಿತರ ಪರ ವಕೀಲರು 1ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡಿದ್ದು, ಅದರಂತೆ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.